ಶ್ರೀ ಸಿ.ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಈ ವರ್ಷ ಇದಕ್ಕೆ ಹಣವನ್ನು ಹೆಚ್ಚಿಗೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಅದಕ್ಕಾಗಿ ಆ ಪ್ರದೇಶದ ರೈತರ ಪರವಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ವರುಣಾ ಕೆನಾಲ್‌ಗೂ ಮತ್ತೆ ವಿಶ್ವೇಶ್ವರಯ್ಯ ಕೆನಾಲ್‌ಗೂ ಮಾಡ್ರನೈಜೇಷನ್ ನಡೆಯುತ್ತಿದೆ, ಇದಕ್ಕೆ ಎಷ್ಟೆಷ್ಟು ಹಣವನ್ನು ಹೆಚ್ಚುವರಿಯಾಗಿ ಕೊಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಯಸುತ್ತೀರಿ ಎಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ — ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣಕ್ಕೆ ನಾವು ಒಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದೇವೆ. ಆದರೆ ಇದಕ್ಕೆ ಆಯವ್ಯಯದಲ್ಲಿ ಕೊಟ್ಟಿರುವುದು ಸಾಲದು ಎನ್ನುತಕ್ಕಂಥ ಮನವಿಯನ್ನು ನಾವು ಈಗಾಗಲೇ ವಿತ್ತ ಇಲಾಖೆಗೆ ಮಾಡಿ ಕೊಂಡಿದ್ದೇವೆ. ಕನಿಷ್ಟ ೫೦೦ ಲಕ್ಷ ರೂಪಾಯಿ ಕೊಡುವುದಕ್ಕೆ ಬೇಡಿಕೆಯನ್ನು ಸಲ್ಲಿಸಿದ್ದೇವೆ. ಅವರು ಕೊಡತಕ್ಕಂಥ ಹಂತದಲ್ಲಿದ್ದಾರೆ. ಈ ಸಾರಿ ಅಷ್ಟನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ವರುಣಾ ಕೆನಾಲ್ ಬಗ್ಗೆ ಹೇಳಿದ್ದಾರೆ. ಈ ಸಾರಿ ನಮ್ಮ ಆಯವ್ಯದಲ್ಲಿ ೫೦೦ ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ ಮತ್ತು ಇದಕ್ಕೆ ಇನ್ನು ಸ್ವಲ್ಪ ಹೆಚ್ಚು ಹಣವನ್ನು ಕೊಟ್ಟು ವಿಶ್ವೇಶ್ವರಯ್ಯ ಕೆನಾಲ್ ಆಧುನೀಕರಣ ಮತ್ತು ವರುಣಾ ಕೆನಾಲ್ ಎರಡರ ಕೆಲಸವನ್ನು ಕೂಡಾ ಏಕಕಾಲದಲ್ಲಿ ಪೂರ್ತಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ತುಮಕೂರಿನ ಗುಬ್ಬಿ ತಾಲ್ಲೂಕಿನ ಇಡಿಗೂರ್ ಗ್ರಾಮಕ್ಕೆ ಬೆಂಗಳೂರಿನಿಂದ ಮತ್ತು ಕುಣಿಗಲ್‌ನಿಂದ ನೇರ ಬಸ್ಸು

೧೦೫೧ ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಗುಬ್ಬಿ ತಾಲ್ಲೂಕಿನ ಇಡಿಗೂರ್ ಗ್ರಾಮಕ್ಕೆ ಬೆಂಗಳೂರಿನಿಂದ ಹಾಗೂ ಕುಣಿಗಲ್‌ನಿಂದ ನೇರ ಬಸ್ಸುಗಳನ್ನು ಓಡಿಸುತ್ತಿದ್ದದು ನಿಜವೇ ?

(ಆ) ಹಾಲಿ ಅದನ್ನು ನಿಲ್ಲಿಸಿರುವುದು ನಿಜವಲ್ಲವೆ ?

(ಇ) ಹಾಗಿದ್ದಲ್ಲಿ ಈ ಸೌಕರ್ಯವನ್ನು ಪುನಃ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

(ಅ) ಹೌದು.

(ಆ) ಬೆಂಗಳೂರು-ಕುಣಿಗಲ್-ಇಡಿಗೂರು ಮಾರ್ಗದಲ್ಲಿ ಓಡಿಸುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸನ್ನು ನಿಲ್ಲಿಸಲಾಗಿದೆ.

(ಇ) ಸಾರಿಗೆ ಒತ್ತಡ ಹೆಚ್ಚಾದಾಗ,

ಶ್ರೀ ಜಿ. ಎಸ್. ಶಿವನಂಜಪ್ಪ. ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಇಡಗೂರಿಗೆ ಬಸ್ಸನ್ನು ಓಡಿಸಲಾಗುತ್ತಿತ್ತು, ಈಗ ಇದನ್ನು ನಿಲ್ಲಿಸಿದ್ದೇವೆ ಎಂದು ಕೊಟ್ಟಿದ್ದಾರೆ. ಹಿಂದೆ ೧೯೮೯ರಲ್ಲಿ ಇದೇ ಸದನದ ಮೂಲಕ ಒಂದು ಅರ್ಜಿಯನ್ನು ಕೊಟ್ಟು ಇಲ್ಲಿ ಬಸ್ಸಿನ ಅವಶ್ಯಕತೆ ಇದೆ, ಇದು ಬಹಳ ಇಂಟೀರಿಯರ್ ವಿಲೇಜ್ ಇದೆ. ಗುಬ್ಬಿ ತಾಲ್ಲೂಕಿಗೆ ಬಸ್ ಸೌಕರ್ಯವನ್ನು ಒದಗಿಸ ಬೇಕೂ ಎಂದು ಕೇಳಿದ್ದೆ. ಆಗ ಅಲ್ಲಿಗೆ ಬಸ್‌ನ್ನು ಹಾಕಿದ್ದರು. ಬೆಂಗಳೂರು ಕುಣಿಗಲ್ ಮಾರ್ಗವಾಗಿ ಬರುವ ಬಸ್ ಅಲ್ಲದೇ ತುಮಕೂರು ಮತ್ತೆ ಗುಬ್ಬಿ ಮಾರ್ಗವಾಗಿ ಒಂದು ಬಸ್‌ನ್ನು ಓಡಿಸುತ್ತಿದ್ದರು, ಈ ಎರಡು ಬಸ್‌ಗಳನ್ನು ನಿಲ್ಲಿಸಿಬಿಟ್ಟಿದ್ದಾರೆ, ಯಾವಾಗ ಬಸ್‌ನ್ನು ಓಡಿಸುತ್ತಾರೆ ಎಂದು ಕೇಳಿದ್ದಕ್ಕೆ ಸಾರಿಗೆ ಒತ್ತಡ ಹೆಚ್ಚಾದಾಗ ಎಂದು ಹೇಳಿದ್ದಾರೆ. ಸಾರಿಗೆ ಒತ್ತಡ ಹೆಚ್ಚಾಗಿತ್ತು, ಆದರಿಂದಲೇ ಅಲ್ಲಿಗೆ ಎರಡು ಬಸ್‌ಗಳನ್ನು ಓಡಿಸುತ್ತಿದ್ದರು. ಈ ಮಧ್ಯೆ ಕಂಡಕ್ಟರ್‌ಗಳು ಏನು ಮಾಡುತ್ತಿದ್ದರು ಎಂದರೆ, ಒಂದು ಬಸ್ ಕೂಡಾ ಚೆಕ್ ಮಾಡುವುದನ್ನು ಅಲ್ಲಿ ಬಿಟ್ಟು ಬಿಟ್ಟಿದ್ದಾರೆ ಕುಣಿಗಲ್‌ನಿಂದ ಇಡಗೂರಿಗೆ ಮೂರು ರೂಪಾಯಿ ಛಾರ್ಜ್ ಇದೆ, ಪ್ರಯಾಣಿಕ ೨-೨೦ ಪೈಸೆಯನ್ನು ಕೊಟ್ಟರೆ ಅದನ್ನು ತೆಗೆದುಕೊಂಡು ಟಿಕೆಟ್‌ನ್ನು ಕೊಡುತ್ತಿರಲಿಲ್ಲ. ಇದರ ಬಗ್ಗೆ ನಾನು ಅನೇಕ ಸಾರಿ ಕಂಪ್ಲೇಂಟನ್ನೂ ಕೊಡಾ ಮಾಡಿದ್ದೇನೆ. ಆದರೂ ಕೂಡಾ ಕ್ರಮ ತೆಗೆದುಕೊಂಡಿಲ್ಲ. ಈಗ ಸಾರಿಗೆ ಒತ್ತಡ ಹೆಚ್ಚಾದಾಗ

ಬಸ್ ಸೌಕರ್ಯ ಮಾಡಿಕೊಡುವರಿಸುತ್ತೇವೆ ಎಂದು ಹೇಳಿದ್ದಾರೆ. ಈ ಉತ್ತರ ಸರಿಯಲ್ಲ. ದಯಮಾಡಿ ಮೊದಲು ಎರಡು ಬಸ್‌ಗಳನ್ನು ಅಲ್ಲಿಗೆ ಕಳುಹಿಸುತ್ತಿದ್ದರು. ಅದೇ ರೀತಿ ಬಸ್‌ಗಳನ್ನು ಓಡಿಸುವುದಕ್ಕೆ ಈ ದಿಸೆಯಲ್ಲಿ ಸರ್ಕಾರದವರು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ಕೆ. ಜೆ. ಜಾರ್ಜ್ —ಮಾನ್ಯ ಅಧ್ಯಕ್ಷರೇ, ಇದು ತುಮಕೂರು ಜಿಲ್ಲೆಯಲ್ಲಿ ಸ್ಟಾನ್-ನ್ಯಾಷನಲೈಸ್ಡ್ ಏರಿಯಾದಲ್ಲಿ ಬರುತ್ತದೆ. ಆದ್ಯತೆಯ ಮೇರೆಗೆ ನಾವು ನ್ಯಾಷನಲೈಸ್ ಏರಿಯಾಗೆ ಬಸ್‌ಗಳನ್ನು ಕೊಡುತ್ತಿದ್ದೇವೆ. ಮತ್ತೆ ಹೊಸ ಸೆಂಟ್ರಲ್ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಪ್ರೈವೇಟ್‌ನವರಿಗೆ ಅವರು ಎಲ್ಲಿ ಬಸ್‌ಗಳನ್ನು ಕೇಳುತ್ತಾರೋ ಅಲ್ಲಿಗೆ ಕೊಡುತ್ತಿದ್ದೇವೆ. ಇಬರ ಬಗ್ಗೆ ಮೊದಲು ನಮ್ಮ ಪಿಟಿಷನ್ ಕಮಿಟಿಗೆ ಮಾನ್ಯ ಸದಸ್ಯರು ಅಪ್ಲಿಕೇಷನನ್ನು ಹಾಕಿದ್ದರು ಅದರ ಪ್ರಕಾರ ಪಿಟಿಷನ್ ಕಮಿಟಿಯವರು ಒಂದು ಎಕ್ಸ್‌ಪೀರಿಯೆನ್ಸ್‌ಡ್ ಬೇಸ್ ಮೇಲೆ ನೀವು ರೂಟನ್ನು ಇಂಟರ್ ಡ್ರೂಸ್ ಮಾಡಿ ಎಂದು ಹೇಳಿದರು ಆಲ್ಲಿ ಏನಾಗಿದೆ ಎಂದು ಹೇಳಿದರೆ ಅಲ್ಲಿ ಬಸ್‌ಗಳನ್ನು ಓಡಿಸಿ ನೋಡಿದಾಗ ಇ.ಪಿ.ಕೆ. ಎಂದು ಹೇಳುತ್ತೇವೆ ಹಾಗೆಂದರೆ ಅರ್ನಿಂಗ್ ಪರ್ ಕಿಲೋಮೀಟರ್ ಭಾರಿ ಕಡಿಮೆ ಬರುತ್ತಿತ್ತು, ಉದಾಹರಣೆಗೆ, ಕುಣಿಗಲ್‌ನಿಂದ ಇಡಗೂರಿಗೆ ಏಕ್ಸಿಲ್‌ನಲ್ಲಿ ರೂಪಾಯಿ ೧.೬೨ ಪೈಸೆ ಬರುತ್ತಿತ್ತು. ಅದೇ ಇಡಗೂರು-ಕುಣಿಗಲ್‌ಗೆ ೨ ರೂಪಾಯಿ ಬರುತ್ತಿತ್ತು. ಇದರಿಂದ ನಮಗೆ ತುಂಬಾ ನಷ್ಟವಾಗುತ್ತಿತ್ತು. ಆದುದರಿಂದ ಇದನ್ನು ನಿಲ್ಲಿಸಿದ್ದೇವೆ. ಸಾಕಷ್ಟು ಪ್ರಯಾಣಿಕರು ಇದ್ದರೆ ಮತ್ತೆ ಪುನರಾರಂಭ ಮಾಡಲಿಕ್ಕೆ ಕಷ್ಟವೇನೂ ಇರುವುದಿಲ್ಲ. ಅಲ್ಲಿ ಮತ್ತೆ ಸರ್ವೆ ಮಾಡಿ ಸಾಕಷ್ಟು ಪ್ರಯಾಣಿಕರು ಸಿಕ್ಕುವುದಾದರೆ ಬಸ್ಸನ್ನು ಪುನರಾರಂಭ ಮಾಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ —ಸರ್ವೆ ಹಿಂದೆ ಮಾಡಿದೆ. ಹಿಂದೆ ಪಿಟಿಷನ್‌ನ್ನು ಕೊಟ್ಟಾಗಲೇ ಸಾರಿಗೆ ಒತ್ತಡ ಹೆಚ್ಚಾಗಿದೆ ಎನ್ನುವ ದೃಷ್ಟಿಯಿಂದ ಎರಡು ಬಸ್‌ಗಳನ್ನು ನೀವು ಅಲ್ಲಿಗೆ ಹಾಕಿದ್ದೀರಿ. ಈಗ ನಿಮ್ಮ ಇನ್‌ಸ್ಪೆಕ್ಷನ್ ಇಲ್ಲದೆ ಅಲ್ಲಿ ಕಂಡಕ್ಟರ್ಸ್ ಮತ್ತೆ ಡ್ರೈವರ್ಸ್ ಇಬ್ಬರೂ ಸೇರಿ, ಅವರಿಗೆ ಬೇಕಾಗಿಲ್ಲದೇ ಇರುವ ರೂಟ್‌ನಲ್ಲಿ ಹಾಕಿದ್ದಾರೆ ಎಂದು ಹೇಳಿ ಈ ರೀತಿ ಹಣವನ್ನು ವಸೂಲಿ ಮಾಡಿಲ್ಲ, ಅವರುಗಳು ಪ್ರಯಾಣಿಕರಿಗೆ ಟೀಟ್ ರಹಿತವಾಗಿ ಪ್ರಯಾಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗಿರೆಯೆಂಬ ಹೊರತು ಜನ ಇಲ್ಲ ಎಂದಲ್ಲ. ಜನಗಳು ಟಾಪ್ ಮೇಲೆ ಬರುತ್ತಾರೆ. ಬಸ್ ಒಳಗಡೆ ಎಷ್ಟು ಜನ ಕುಳಿತುಕೊಳ್ಳುತ್ತಾರೋ ಅಷ್ಟೇ ಜನ ಟಾಪ ಮೇಲೆ ಹೋಗುತ್ತಿದ್ದಾರೆ. ಅದನ್ನು ನಾನು ಅನೇಕ ಸಾರಿ ನೋಡಿದ್ದೇನೆ. ಪ್ರತಿ ಸಾರಿ ನಾನು ಹೋದಾಗ ಆ ಬೇಡಿಕೆ ಇದ್ದೇ ಇದೆ. ಆದ್ದರಿಂದ ದಯಮಾಡಿ ಆದರ ಬಗ್ಗೆ ಯೋಚನೆ ಮಾಡಿ ಕೂಡಲೇ ಅಲ್ಲಿ ಬಸ್‌ಗಳನ್ನು ಓಡಿಸುವ ವ್ಯವಸ್ಥೆಯನ್ನು ಮಾಡಬೇಕು.

೧೨. ೦೦ ಪಿ.ಎಂ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಸಭಾಧ್ಯಕ್ಷರೇ, ಇದು ಒಂದು ದೊಡ್ಡ ಸಮಸ್ಯೆ. ಈಗ ಸನ್ಮಾನ್ಯ ಸದಸ್ಯರು ಜನರ ಟಾಪ್ ಮೇಲೆ ಹೋಗುತ್ತಾರೆ ಎಂದು ಹೇಳುತ್ತಿದ್ದಾರೆ. ನಮಗೆ ಬಂದಿರುವ ರೆಕಾರ್ಡ್ ಪ್ರಕಾರ, ನಮಗೆ ಬರುವ ರೆವಿನ್ಯೂ ಪ್ರಕಾರ ಒಂದು, ಒಂದೂವರೆ ಎರಡು ರೂಪಾಯಿ ಬರುತ್ತದೆ. ನಮಗೆ ಖರ್ಚು ಆಗುತ್ತಾ ಇರುವುದು ಒಂದು ಕಿಲೋಮೀಟರ್‌ಗೆ ಸುಮಾರು ಆರು ರೂಪಾಯಿಗಳು. ಈಗ ಪ್ಯಾಸೆಂಜರ್ಸ್ ಕಂಡಕ್ಟರ್ ಮೇಲೆ ಹೇಳುತ್ತಿದ್ದಾರೆ. ಪ್ಯಾಸೆಂಜರ್ಸ್ ನಿಜವಾಗಿ ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡುವುದಾದರೆ ನಮಗೆ ದುಡ್ಡು ಬರುತ್ತಿತ್ತು. ನಾವು ಬಸ್ ಓಡಿಸುತ್ತಾ ಇದ್ದೆವು. ಆದರೆ ಈ ತರಹ ನಮಗೆ ದುಡ್ಡೂ ಬರದೇ, ನಾವು ಎಲ್ಲಾ ಕಡೆ ಬಸ್ ಓಡಿಸಬೇಕು ಎಂದರೆ ಕೆ.ಎಸ್.ಆರ್.ಟಿ.ಸಿ. ಯನ್ನು ಯಾವ ರೀತಿ ನಡೆಸಲಿಕ್ಕೆ ಆಗುತ್ತದೆ. ಆದುದರಿಂದ ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದರಲ್ಲಿ ವಿಚಾರದಲ್ಲಿ ನಾನು ಇನ್ನೂ ಒಂದು ಸಾರಿ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ವಿಚಿತ್ರವಾದ ಉತ್ತರ ಬಂದಿದೆ ನಾನು ಸಾರಿಗೆ ಮಂತ್ರಿಯಾಗಿ ಕುಳಿತುಕೊಂಡಿದ್ದಾಗ ಕೂಡ ಇದೇ ಉತ್ತರವನ್ನು ನನ್ನ ಕಡೆಯಿಂದ ನಮ್ಮ ಅಧಿಕಾರಿ ಮಿತ್ರರು ಮಾನ್ಯ ಶಿವನಂಜಪ್ಪನವರಿಗೆ ಕೊಡಿಸಿದ್ದರು. ಸಾರಿಗೆ ಒತ್ತಡ ಹೆಚ್ಚು ಆದ ಮೇಲೆ ಬಸ್ ಹಾಕಿಸುತ್ತೇವೆ ಎಂದು ಉತ್ತರ ಕೊಡಿಸಿದ್ದರು. ಈ ಒತ್ತಡ ಯಾವಾಗ ಹೆಚ್ಚು ಆಗಬಹುದು ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಯಾವ ರೀತಿ ಉತ್ತರವನ್ನು ಕೊಟ್ಟಿದ್ದೀರೋ ಅದೇ ರೀತಿ ಇವರು ಉತ್ತರ ಕೊಟ್ಟಿದ್ದಾರೆ...

ಅಧ್ಯಕ್ಷರು.—ಅಧಿಕಾರಿಗಳು ಬದಲಾವಣೆ ಯಾದಾಗ ಒತ್ತಡ ಜಾಸ್ತಿ ಆಗುತ್ತದೆ.

ಶ್ರೀ. ಕೆ. ಜೆ. ಜಾರ್ಜ್.—ನಮ್ಮ ಸರ್ಕಾರ ಬಂದ ಮೇಲೆ ಇದನ್ನು ನಿಲ್ಲಿಸಿಲ್ಲ. ಅದನ್ನು ಜೂನ್ ೧೯೮೯ರಲ್ಲಿ ನಿಲ್ಲಿಸಿದ್ದಾರೆ. ನೀವೇ ಕೊಟ್ಟು ನೀವೇ ನಿಲ್ಲಿಸಿರಬಹುದೆಂದು ಕಾಣುತ್ತದೆ.

ಶ್ರೀ ಸಿ. ಬೈರೇಗೌಡ.—ಅಧಿಕಾರಿಗಳನ್ನು ಬದಲಾವಣೆ ಮಾಡಿದರೆ ಉತ್ತರ ಸಹ ಬದಲಾವಣೆ ಆಗುತ್ತದೆಯೇ ಎಂಬುದನ್ನು ದಯವಿಟ್ಟು ಯೋಚನೆ ಮಾಡುತ್ತೀರಾ?

ಬೆಂಗಳೂರು ನಗರದ ನಾಗರೀಕರಿಗೆ ಪಡಿತರ ಚೀಟಿಯನ್ನು ನೀಡಲು ಏಕ ಪಂಖಿ ಪದ್ಧತಿ

೬೫೬ ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ರೇಷನ್ ಕಾರ್ಡ್‌ಗಳನ್ನು ಸಾರ್ವಜನಿಕರಿಗೆ ಶೀಘ್ರವಾಗಿ ಕೊಡುವುದಕ್ಕಾಗಿ ಸಿಂಗಲ್ ವಿಂಡೋ ಪದ್ಧತಿಯನ್ನು ಜಾರಿಗೆ ತರಲಾಗುವುದೇ?

ಆ) ಇಲ್ಲದಿದ್ದಲ್ಲಿ ಸರ್ಕಾರವು ಪಡಿತರ ಚೀಟಿಗಳನ್ನು ಕೊಡಲು ಸಿಂಗಲ್ ವಿಂಡೋ ಪದ್ಧತಿಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳುವುದೇ?

ಶ್ರೀ ಅಜೀಜ್ ಸೇಠ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಸಿಂಗಲ್ ವಿಂಡೋ ಪದ್ಧತಿಯನ್ನು ಬೆಂಗಳೂರು ಅನೌಪಚಾರಿಕ ಪ್ರದೇಶದ ದಕ್ಷಿಣವಲಯ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ.

ಆ) ಸದರಿ ಪದ್ಧತಿಯ ನಿರ್ವಹಣೆಯನ್ನು ಪರಿಶೀಲಿಸಿದ ನಂತರ ಇದನ್ನು ರಾಜ್ಯಾದ್ಯಂತ ಜಾರಿಗೆ ತರುವುದನ್ನು ಪರಿಶೀಲಿಸಲಾಗುವುದು.

ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಸಿಂಗಲ್ ವಿಂಡೋ ಸಿಸ್ಟಂನಲ್ಲಿ ರೇಷನ್ ಕಾರ್ಡ್‌ಇಶ್ಯೂ ಮಾಡುವುದರ ಬಗ್ಗೆ ಕೇಳಿದ ನನ್ನ ಮೊದಲನೇ ಪ್ರಶ್ನೆಗೆ ಬೆಂಗಳೂರು ಸೌತ್ ರೇಂಜ್‌ನಲ್ಲಿ ಇಂಟ್ರೊಡ್ಯೂಸ್ ಮಾಡಿದ್ದೇವೆ ಎಂದೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆಗೆ, ಇದರ ರಿಸಲ್ಟ್ ಏನು ಎವಾಲ್ಯುಯೇಟ್ ಮಾಡಿ, ಅವೇಲೆ ಇಡೀ ಕರ್ನಾಟಕ ರಾಜ್ಯದಲ್ಲಿ ಸಿಂಗಲ್ ವಿಂಡೋ ಸಿಸ್ಟಂನಲ್ಲಿ ರೇಷನ್ ಕಾರ್ಡ್ ಇಶ್ಯೂ ಮಾಡುವುದಕ್ಕೆ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಪರಿಗಣಿಸಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ತಮಗೆ ಗೊತ್ತಿರುವ ಹಾಗೆ, ಯಾರೇ ವ್ಯಕ್ತಿ ಕೊಳಚೆ ಪ್ರದೇಶದವರಾಗಲೀ ಅಥವಾ ಅವಿದ್ಯಾವಂತರಾಗಲೀ ಒಂದು ರೇಷನ್ ಕಾರ್ಡ್ ತೆಗೆದುಕೊಳ್ಳಬೇಕಾದರೆ ಸುಮಾರು ೧೦.೧೫,೨೦ ಬಾರಿ ಡೆಪ್ಯುಟಿ ಡೈರೆಕ್ಟರ್, ಫುಡ್ ಅಂಡ್ ಸಿವಿಲ್ ಸಪ್ಲೈಸ್ ಆಫೀಸ್‌ಗೆ ಸುತ್ತಾಡಬೇಕಾಗುತ್ತದೆ. ಅವರು ಅಲ್ಲಿ ಅಪ್ಲಿಕೇಶನ್ ಕೊಟ್ಟು, ಅಫಿಡವಿಟ್ ಕೆ ಟ್ಟು ಕಾರ್ಪೊರೇಷನ್ ಎಕ್ಸ್‌ಟ್ಯಾಕ್ಟ್ ತೆಗೆದುಕೊಂಡು ಇಷ್ಟೆಲ್ಲಾ ಮಾಡಿ ಆಫೀಸಿಗೆ ಕೊಟ್ಟರೂ ಅಲ್ಲಿ ಜವಾಬ್ದಾರಿಯಿಂದ ಆನ್ಸರ್ ಮಾಡುವವರು ಯಾರೂ ಸಿಗುವುದಿಲ್ಲ ಅವರಂ ಹತ್ತಾರು ಜನರ ಹತ್ತಿರ ಹೋಗಿ ಸುತ್ತಾಡಿಕೊಂಡು ಬರುತ್ತಾರೆ. ಇವೊತ್ತು ರೇಷನ್‌ಕಾರ್ಡ್ ತೆಗೆದುಕೊಳ್ಳುವುದು ಎಷ್ಟು ಸುಲಭದ ಕೆಲಸ ಎಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಸಿಂಗಲ್ ವಿಂಡೋ ಸಿಸ್ಟಂ ಇಂಟ್ರೊಡ್ಯೂಸ್ ಮಾಡಿದರೆ ಒಳ್ಳೆಯದು, ಫಾಸ್ಟ್ ಎಕ್ಸ್‌ಪೀರಿಯನ್ಸ್‌ನಿಂದ ನಮಗೆ ಗೊತ್ತಾಗಿದೆ. ಯಾವುದೇ ಡಿಪಾರ್ಟ್‌ಮೆಂಟ್‌ನಲ್ಲಿ ಸಿಂಗಲ್ ವಿಂಡೋ ಸಿಸ್ಟಂನಲ್ಲಿ ಅಲ್ಲಿಯೇ ಅಪ್ಲಿಕೇಶನ್ ತೆಗೆದುಕೊಳ್ಳುವವರು ಉತ್ತರ ಕೊಡುವವರು ಒಬ್ಬರೇ ಜವಾಬ್ದಾರಿ ವ್ಯಕ್ತಿಗಳು ಇರುತ್ತಾರೆ. ಅವರಿಂದ ಉತ್ತರ ಪಡೆದುಕೊಂಡು ಮುಂದಿನ ಕೆಲಸ ಬಹಳ ಬೇಗ ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕ ವಿಷಯ ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಸಿಂಗಲ್ ವಿಂಡೋ ಸಿಸ್ಟಂ ಬರೇ ಬೆಂಗಳೂರು ಸೌತ್ ರೇಂಜ್‌ಗೆ ಅಲ್ಲ, ಇಡೀ ಕರ್ನಾಟಕ ರಾಜ್ಯಕ್ಕೆ ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಎಂದು ಕೇಳುತ್ತಿದ್ದೇನೆ.

SRI AZIZ SAIT.— Single Window system is introduced in the Office of the Dy. Director, South Range, Bangalore informal rationing area. It is in the experimental stage. Surrender certificates and deletion certificates are issued to the applicants within one hour. Change of address will be done